MANGALORE UNIVERSITY

NEHRU CHINTHANA KENDRA

In Association with

S.V.P. INSTITUTE OF KANNADA STUDIES

DEPARTMENT OF ENGLISH



CHILDREN'S FILM Festival

All are invited

17 to 21 November 2026

Mangala Auditorium
Mangalagangothri

ಮಂಗಳೂರು ವಿಶ್ವವಿದ್ಯಾನಿಲಯ

ನೆಹರು ಚಿಂತನ ಕೇಂದ್ರ

ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ

ಇಂಗ್ಲೀಷ್ ವಿಭಾಗ

ಸಹಯೋಗದಲ್ಲಿ

17 ರಿಂದ 21 ನವೆಂಬರ್ 2026

ಮಂಗಳ ಸಭಾಂಗಣ,
ಮಂಗಳ ಗಂಗೋತ್ರಿ

ಮಕ್ಕಳ ಚಲನಚಿತ್ರೋತ್ಸವ

ತಮಗೆಲ್ಲರಿಗೂ ಆದರದ ಸ್ವಾಗತ

CONCEPT NOTE

Cinema, for Jawaharlal Nehru, was not merely a medium of entertainment but an important instrument of cultural expression, education and nation-building. His vision for Indian cinema was reflected in his participation in the Film Seminar, held in New Delhi from 27 February to 4 March 1955, which he inaugurated. Significantly, in his inaugural address, Nehru expressed concern over the inadequate presence of children's films in India and emphasised that good children's cinema could become a powerful instrument in shaping a child's development, imagination and understanding of life, without resorting to sermons or moral instruction. This vision was part of his larger commitment to nurturing India's cultural institutions and strengthening the foundations of cinema, art, theatre and other creative expressions in post-independence India.

Drawing inspiration from this historical and intellectual context, the Nehru Chinthana Kendra, Mangalore University, seeks to revisit the evolution of cinema in India, whose focus is children, through this five-day film festival. The initiative aims to examine how children's films have evolved over the decades in their themes, narratives, aesthetics and representation of childhood, while critically exploring their influence on children's imagination, values, social consciousness and understanding of diverse cultural and social realities. Through films from different languages, regions and periods, the festival seeks to understand how cinema has portrayed childhood, responded to changing social realities and contributed to the intellectual, emotional and cultural development of young audiences. In doing so, it endeavours to carry forward Nehru's belief in the transformative potential of cinema and its role in nurturing a generation that is creative, reflective, socially sensitive and conscious of India's pluralistic identity.

ಪಂಡಿತ್ ಜವಾಹರಲಾಲ್ ನೆಹರು ಅವರು ಸಿನಿಮಾ ಕೇವಲ ಮನರಂಜನೆಯ ಮಾಧ್ಯಮವಾಗಿರದೆ, ಸಾಂಸ್ಕೃತಿಕ ಅಭಿವ್ಯಕ್ತಿ, ಶಿಕ್ಷಣ ಮತ್ತು ರಾಷ್ಟ್ರ ನಿರ್ಮಾಣದ ಪ್ರಬಲ ಸಾಧನ ಎಂದು ನಂಬಿದ್ದರು. 1955ರ ಫೆಬ್ರವರಿ 27 ರಿಂದ ಮಾರ್ಚ್ 4ರವರೆಗೆ ನವದೆಹಲಿಯಲ್ಲಿ ನಡೆದ ಚಲನಚಿತ್ರ ವಿಚಾರ ಸಂಕಿರಣದಲ್ಲಿ ಭಾರತೀಯ ಸಿನಿಮಾದ ಕುರಿತ ಅವರ ದೂರದೃಷ್ಟಿ ಸ್ಪಷ್ಟವಾಗಿ ಪ್ರತಿಫಲಿಸಿದೆ. ಈ ವಿಚಾರ ಸಂಕಿರಣವನ್ನು ಉದ್ಘಾಟಿಸಿದ ನೆಹರು ಅವರು ಭಾರತದಲ್ಲಿ ಮಕ್ಕಳಿಗಾಗಿ ನಿರ್ಮಾಣವಾಗುತ್ತಿದ್ದ ಚಲನಚಿತ್ರಗಳ ಕೊರತೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು. ಮಕ್ಕಳ ಚಲನಚಿತ್ರಗಳು ಕೇವಲ ನೀತಿಬೋಧನೆ ಅಥವಾ ಉಪದೇಶಗಳಿಗೆ ಸೀಮಿತವಾಗದೆ, ಅವರ ಕಲ್ಪನಾಶಕ್ತಿ, ಸೃಜನಶೀಲತೆ, ಜೀವನದೃಷ್ಟಿ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿರಬೇಕು ಎಂಬ ಮಹತ್ವದ ಆಶಯವನ್ನು ಅವರು ವ್ಯಕ್ತಪಡಿಸಿದ್ದರು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಿನಿಮಾ, ಕಲೆ, ರಂಗಭೂಮಿ ಹಾಗೂ ಇತರ ಸೃಜನಶೀಲ ಅಭಿವ್ಯಕ್ತಿಗಳಿಗೆ ಸಾಂಸ್ಥಿಕ ನೆಲೆ ಕಲ್ಪಿಸುವ ಮೂಲಕ ದೇಶದ ಸಾಂಸ್ಕೃತಿಕ ಬೆಳವಣಿಗೆಗೆ ಭದ್ರ ಬುನಾದಿ ಹಾಕುವಲ್ಲಿ ನೆಹರು ಅವರು ಮುಖ್ಯ ಪಾತ್ರ ವಹಿಸಿದ್ದರು. ಅವರ ಈ ಐತಿಹಾಸಿಕ ಮತ್ತು ಪೈಚಾರಿಕ ಪರಂಪರೆಯಿಂದ ಪ್ರೇರಣೆ ಪಡೆದು, ಮಂಗಳೂರು ವಿಶ್ವವಿದ್ಯಾನಿಲಯದ ನೆಹರು ಚಿಂತನ ಕೇಂದ್ರವು ಐದು ದಿನಗಳ ಮಕ್ಕಳ ಚಲನಚಿತ್ರೋತ್ಸವದ ಮೂಲಕ ಭಾರತದಲ್ಲಿ ಮಕ್ಕಳ ಚಲನಚಿತ್ರಗಳ ವಿಕಾಸ, ಬೆಳವಣಿಗೆ ಮತ್ತು ಸಾಮಾಜಿಕ ಪ್ರಭಾವವನ್ನು ಅಧ್ಯಯನ ಮಾಡುವ ಆಶಯ ಹೊಂದಿದೆ.

ಕಾಲದಿಂದ ಕಾಲಕ್ಕೆ ಮಕ್ಕಳ ಚಲನಚಿತ್ರಗಳ ವಸ್ತು, ಕಥನ ಶೈಲಿ, ಕಲಾತ್ಮಕ ಅಭಿವ್ಯಕ್ತಿ ಹಾಗೂ ಬಾಲ್ಯದ ಚಿತ್ರಣಗಳಲ್ಲಿ ಉಂಟಾಗಿರುವ ಬದಲಾವಣೆಗಳನ್ನು ಗುರುತಿಸುವುದರ ಜೊತೆಗೆ, ಮಕ್ಕಳ ಕಲ್ಪನಾಶಕ್ತಿ, ಮೌಲ್ಯಪ್ರಜ್ಞೆ, ಸಾಮಾಜಿಕ ಸಂವೇದನೆ ಮತ್ತು ಸುತ್ತಲಿನ ಜಗತ್ತನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ರೂಪಿಸುವಲ್ಲಿ ಈ ಚಲನಚಿತ್ರಗಳು ಬೀರಿರುವ ಪ್ರಭಾವವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವುದು ಈ ಉತ್ಸವದ ಪ್ರಮುಖ ಉದ್ದೇಶವಾಗಿದೆ. ವಿವಿಧ ಭಾಷೆ, ಪ್ರದೇಶ ಮತ್ತು ಕಾಲಘಟ್ಟಗಳ ಚಲನಚಿತ್ರಗಳ ಮೂಲಕ ಭಾರತೀಯ ಸಮಾಜದಲ್ಲಿ ಬಾಲ್ಯದ ಪರಿಕಲ್ಪನೆ ಹೇಗೆ ಬದಲಾಗಿದೆ, ಸಿನಿಮಾ ಮಕ್ಕಳ ಬದುಕಿನ ವಾಸ್ತವಗಳನ್ನು ಹೇಗೆ ಪ್ರತಿಬಿಂಬಿಸಿದೆ ಹಾಗೂ ಬದಲಾಗುತ್ತಿರುವ ಸಾಮಾಜಿಕ, ಸಾಂಸ್ಕೃತಿಕ ಸನ್ನಿವೇಶಗಳಿಗೆ ಹೇಗೆ ಸ್ಪಂದಿಸಿದೆ ಎಂಬುದನ್ನು ಅರಿಯಲು ಈ ಉತ್ಸವ ಪ್ರಯತ್ನಿಸುತ್ತದೆ. ಈ ಚಲನಚಿತ್ರೋತ್ಸವವು ಕೇವಲ ಚಲನಚಿತ್ರಗಳ ಪ್ರದರ್ಶನಕ್ಕೆ ಸೀಮಿತವಾಗದೆ, ಮಕ್ಕಳ ಸಿನಿಮಾ ಕುರಿತ ಶೈಕ್ಷಣಿಕ ಚರ್ಚೆ, ವಿಮರ್ಶೆ ಮತ್ತು ಸಂವಾದಗಳಿಗೆ ವೇದಿಕೆಯಾಗಲಿದೆ. ಈ ಮೂಲಕ ಸಿನಿಮಾದ ಪರಿವರ್ತನಾತ್ಮಕ ಶಕ್ತಿಯ ಕುರಿತ ನೆಹರು ಅವರ ಆಶಯವನ್ನು ಸಮಕಾಲೀನ ಸಂದರ್ಭದಲ್ಲಿ ಮರುಶೋಧಿಸುವುದರ ಜೊತೆಗೆ, ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ, ಸಾಮಾಜಿಕ ಹೊಣೆಗಾರಿಕೆ ಮತ್ತು ಭಾರತದ ಬಹುತ್ವದ ಅರಿವುಳ್ಳ ಸಂವೇದನಾಶೀಲ ಯುವಪೀಳಿಗೆಯನ್ನು ರೂಪಿಸುವ ಸಾಂಸ್ಕೃತಿಕ ಪ್ರಯತ್ನವಾಗಿ ಈ ಚಲನಚಿತ್ರೋತ್ಸವವನ್ನು ಆಯೋಜಿಸಲಾಗಿದೆ.

DAY 1 17 November 2026		ಮೊದಲ ದಿನ 17.11.2026
9:30 AM	:	**Screening of Bharat Ek Khoj (Discovery of India)**
ಪೂರ್ವಾಹ್ನ 9.30 ರಿಂದ	:	**ನೆಹರೂರವರ ಭಾರತ ದರ್ಶನ ಪ್ರಸ್ತುತಿ**
ಪೂರ್ವಾಹ್ನ 10.00 ರಿಂದ		
Inauguration	:	**Sri T. S. Nagabharana** Renowned Film Director, Bengaluru
ಉದ್ಘಾಟನೆ	:	**ಶ್ರೀ ಟಿ.ಎಸ್. ನಾಗಾಭರಣ** ಖ್ಯಾತ ಸಿನಿಮಾ ನಿರ್ದೇಶಕರು, ಬೆಂಗಳೂರು
Presidential Address	:	**Prof. P. L. Dharma** Vice-Chancellor, Mangalore University
ಅಧ್ಯಕ್ಷತೆ	:	**ಪ್ರೊ. ಪಿ.ಎಲ್. ಧರ್ಮ** ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ
Introductory Remarks	:	**Sri Santhosh B. Jagalasar,** K.A.S (Senior Scale) Registrar, Mangalore University
ಪ್ರಸ್ತಾವನೆ	:	**ಶ್ರೀ ಸಂತೋಷ್ ಬಿ. ಜಗಲಸಾರ** ಕೆ.ಎ.ಎಸ್. (ಹಿರಿಯ ಶ್ರೇಣಿ) ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ
12:00 PM	:	**Discussion**
12 ರಿಂದ	:	**ಮುಕ್ತ ಸಂವಾದ**
Chief Guest	:	**Sri T. S. Nagabharana** Renowned Film Director, Bengaluru **ಶ್ರೀ ಟಿ.ಎಸ್. ನಾಗಾಭರಣ** ಖ್ಯಾತ ಸಿನಿಮಾ ನಿರ್ದೇಶಕರು, ಬೆಂಗಳೂರು
Moderator	:	**Dr. Dhananjaya Kumble** Chairman S.V. P Institute of Kannada Studies Mangalore University **ಡಾ. ಧನಂಜಯ ಕುಂಬ್ಳೆ** ಅಧ್ಯಕ್ಷರು, ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ



FILMS to be screened
1.30 PM -4:00 PM

ಮಧ್ಯಾಹ್ನ
1.30 ರಿಂದ 4.00 ರ ತನಕ
ಚಲನಚಿತ್ರ ಪ್ರದರ್ಶನ

Day 1



17.11.2026 ಮಧ್ಯಾಹ್ನ 1.30 ಗಂಟೆಗೆ

Kannada Film :
Chinnari Mutha

ಕನ್ನಡ ಚಲನಚಿತ್ರ:
ಚಿನ್ನಾರಿಮುತ್ತ

Day 2



18.11.2026 ಮಧ್ಯಾಹ್ನ 1.30 ಗಂಟೆಗೆ

Tulu Movie **Koti Chennaya**

Discussant: **Sri Thamma Laxman,** Renowned Playwright and Art Director, Mangalore

ತುಳು ಚಲನಚಿತ್ರ: **ಕೋಟಿ ಚೆನ್ನಯ**

ಸಂವಾದಕರು: **ಶ್ರೀ ತಮ್ಮ ಲಕ್ಷ್ಮಣ**
ಹಿರಿಯ ನಾಟಕಕಾರ ಮತ್ತು ಕಲಾ ನಿರ್ದೇಶಕರು, ಮಂಗಳೂರು

Day 3



19.11.2026 ಮಧ್ಯಾಹ್ನ 1.30 ಗಂಟೆಗೆ


Tamil Movie: **Kaaka Muttai**

Discussant: **Sri Samvartha Sahil** Writer & Film Critic, Manipal

ತಮಿಳು ಚಲನಚಿತ್ರ: **ಕಾಕ ಮುಟ್ಟೈ**

ಸಂವಾದಕರು: **ಸಂವರ್ತ ಸಾಹಿಲ್**
ಲೇಖಕರು ಮತ್ತು ಸಿನಿಮಾ ವಿಮರ್ಶಕರು, ಮಣಿಪಾಲ

Day 4



20.11.2026 ಮಧ್ಯಾಹ್ನ 1.30 ಗಂಟೆಗೆ

English Movie: **Dead Poets Society**

Discussant: **Zaibunnisa Abdul Razak Hammabba**
Assistant Professor, Government First Grade College, Muniyalu

ಇಂಗ್ಲೀಷ್ ಚಲನಚಿತ್ರ : **ಡೆಡ್ ಪೊಯೆಟ್ಸ್ ಸೊಸೈಟಿ**

ಸಂವಾದಕರು: **ಜೈಬುನ್ನಿಸ ಅಬ್ದುಲ್ ರಜಾಕ್ ಹಮ್ಮಬ್ಬ** ,ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಮುನಿಯಾಲು

Day 5



21.11.2026 ಬೆಳಗ್ಗೆ 10.00 ಗಂಟೆಗೆ

Malayalam Movie: **Kummatty**

Discussant: **Dr. Sanjoop K.P.,** Assistant Professor
NMAM Institute of Technology, Nitte (Deemed to be University), Mangalore

ಮಲಯಾಳಂ ಚಲನಚಿತ್ರ : **ಕುಮ್ಮಾಟಿ**

ಸಂವಾದಕರು: **ಡಾ. ಸಂಜೂಪ್ ಕೆ.ಪಿ.,** ಸಹಾಯಕ ಪ್ರಾಧ್ಯಾಪಕರು
ಎನ್.ಎಮ್ ಎ.ಎಮ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ನಿಟ್ಟೆ (ಪರಿಗಣಿತ ವಿಶ್ವವಿದ್ಯಾನಿಲಯ) ಮಂಗಳೂರು

Day 5



21.11.2026 ಮಧ್ಯಾಹ್ನ 1.30 ಗಂಟೆಗೆ

Hindi Movie: **A Billion Colour Story**

Discussant: **Dr. Vishnumoorthy Prabhu** Associate Professor
GFGC and Centre for PG Studies Thenkanidiyu

ಹಿಂದಿ ಚಲನಚಿತ್ರ: **ಎ ಬಿಲಿಯನ್ ಕಲರ್ ಸ್ಟೋರಿ**

ಸಂವಾದಕರು : **ಡಾ. ವಿಷ್ಣುಮೂರ್ತಿ ಪ್ರಭು** ಸಹ ಪ್ರಾಧ್ಯಾಪಕರು
ಸ.ಪ್ರ.ದ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ತೆಂಕನಿಡಿಯೂರು

Prof. Prashantha Naik
Director
Nehru Chinthana Kendra, Mangalore University

Sri Santhosh B Jagalasar K.A.S (Senior Scale)
Registrar,
Mangalore University

Prof. Parinitha
Chairperson
Department of English, Mangalore University

Dr. Dhananjaya Kumble
Chairman
S.V. P Institute of Kannada Studies, Mangalore University